
**ಒಮ್ಮೆ ಅಮ್ಮನಿಗೆ ಸುಮ್ಮನೆ ಕೀಟಲೆಗೆ ಕೇಳಿದೆ. ಅಪ್ಪಾ ನಿನಗೆ ಹೊಡೀತಿದ್ನಾ ಅಂತ. ನಿಮಪ್ಪನಿಗೆ ಹುಚ್ಚು ಪ್ರೀತಿ ಹುಚ್ಚು ಕೋಪ ಸಂಸಾರ ಅಂದ್ಮೇಲೆ ಅದೆಲ್ಲಾ ಇರೋದೇ ಅಂತ ಹಾರಿಸಿದಳು. ಅಪ್ಪನ ಬಗ್ಗೆ ಮಕ್ಕಳಲ್ಲಿ ಸದರದ ಭಾವನೆ ಬಾರದಿರಲಿ ಎಂದು ಎಷ್ಟು ಚೆನ್ನಾಗಿ ಎಚ್ಚರ ವಹಿಸಿದಳು. ಅಮ್ಮ ಜಾಣ್ಮೆ ಮತ್ತು ಸಂಯಮದ ಪ್ರತೀಕ ಎಂಬುದರಲ್ಲಿ ಸಂಶಯವಿಲ್ಲ.**

# ಹುಡುಕಾಟ



■ **ಅಮಚವಾಡಿ ಹರಿದಾಸ**
ಕಲೆ: ಅಭಿಷೇಕ್ ಹಳೇಮನಿ

ಅಪ್ಪ ಕಣ್ಮುಚ್ಚಿದಾಗ ನಾನಿನ್ನೂ ಈ ಪ್ರಪಂಚದಲ್ಲಿ ಸರಿಯಾಗಿ ಕಣ್ಣೇ ತೆರೆದಿರಲಿಲ್ಲ. ಸಾವೆಂದರೇನೆಂದು ತಿಳಿದಿರದ ಎಳೇ ವಯಸ್ಸು. ಮನೆಮಂದಿಯೆಲ್ಲಾ ಅಪ್ಪನ ಶವದ ಮುಂದೆ ಕುಳಿತು ರೋದಿಸುತ್ತಿದ್ದರು. ಎಲ್ಲರೂ ಅಳುತ್ತಿದ್ದರೆಂದು ನಾನೂ ಅಳುತ್ತಿದ್ದಿರಬೇಕು. ಅಪ್ಪನ ಶವ ಹೊತ್ತವರು ಸ್ಮಶಾನದಿಂದ ಹಿಂದಿರುಗುವ ಸಮಯಕ್ಕೆ ನಾನು ವಾರಿಗೆಯವರೊಂದಿಗೆ ಗೋಲಿ ಆಡುತ್ತಿದ್ದೆ. ಇದೆಲ್ಲಾ ಈಗ್ಗೆ ನಲವತ್ತೆರಡು ವರ್ಷಗಳ ಹಿಂದಿನ ಸಂಗತಿ. ಈಗಲೂ ನನ್ನ ಮನಸ್ಸಿನಲ್ಲಿ ಅಪ್ಪನ ಸ್ಪಷ್ಟ ರೂಪವೇ ಇಲ್ಲ. ಕನಿಷ್ಠ ನಮ್ಮ ಮನೆಯಲ್ಲಿ ಅಪ್ಪನ ಒಂದು ಸರಿಯಾದ ಭಾವಚಿತ್ರವೂ ಇಲ್ಲ. ಇಷ್ಟು ವರ್ಷಗಳ ಕಾಲ ನಾನು ಅವನನ್ನು ನೆನಪಿಸಿಕೊಂಡದ್ದೂ ತೀರಾ ಕಡಿಮೆಯೇ. ಆದರೆ ಆಶ್ಚರ್ಯವಾಗುತ್ತಿದೆ. ಈಗ ಎಲ್ಲವೂ ಮುಗಿದ ಅಧ್ಯಾಯ ಎಂದು ಭಾವಿಸಿರುವ ಈ ಸಮಯದಲ್ಲಿ ಇದ್ದಕ್ಕಿದ್ದಂತೆ ನನ್ನಪ್ಪ ಧುತ್ತೆಂದು ನನ್ನ ಮನಸ್ಸನ್ನು ಗಾಢವಾಗಿ ಆವರಿಸಿಕೊಂಡುಬಿಟ್ಟಿದ್ದಾನೆ. ಅಪ್ಪ ಸತ್ತಾಗ ಅಮ್ಮನ ಮುಂದೆ ಇದ್ದ ಒಂದೇ ಪ್ರಶ್ನೆ, ಮುಂದೇನು? ಮಕ್ಕಳ ತುತ್ತಿನ ಕೂಳಿಗೆ ಗತಿಯೇನು?

ದಿನನಿತ್ಯ ಅಮ್ಮ ಈ ಪ್ರಶ್ನೆಗೆ ಉತ್ತರ ಹುಡುಕಲು ಮಾಡಿದ ಪ್ರಯತ್ನದ ಫಲ ಅವಳ ಹೋರಾಟದ ಬದುಕು. ಈ ಪ್ರಯಾಣದಲ್ಲಿ ಸಿಕ್ಕಿತು ಮಕ್ಕಳಿಗೂ ಜೀವನದ ಅಮೂಲ್ಯ ಪಾಠ. ಹುಡುಕಾಟ ಹುಡುಕಾಟ ನಿತ್ಯದ ಕೂಳಿಗಾಗಿ ಇನ್ನಿಲ್ಲದ ಪರದಾಟ... ಉಳಿವಿಗಾಗಿ ಅವಿರತ ಹೋರಾಟ. ಮಕ್ಕಳು ಬೇಗ ಜಾಣರಾದರು. ಮನೆಯ ಪರಿಸ್ಥಿತಿಯನ್ನು ಬೇಗ ಅರ್ಥ ಮಾಡಿಕೊಂಡರು. ಅಥವಾ ಮನೆಯ ಪರಿಸ್ಥಿತಿಯೇ ಮಕ್ಕಳನ್ನು ಜಾಣರನ್ನಾಗಿ ಮಾಡಿರಬೇಕು ತೋಳಿಗೆ ಸ್ವಲ್ಪ ಶಕ್ತಿ ಬರುತ್ತಿದ್ದಂತೆ ಅಮ್ಮನಿಗೆ ಕೈ ಜೋಡಿಸಿದರು ಅಂತೂ ತುತ್ತು ಕೂಳಿಗಾಗಿ ಬವಣೆಪಡುವ ದಿನಗಳು ಕ್ರಮೇಣ ಕಡಿಮೆಯಾಗತೊಡಗಿದವು.

ಈಗ ಅಪ್ಪ ನನ್ನ ಮನಸ್ಸನ್ನು ಆವರಿಸಿಕೊಂಡ ಕ್ಷಣದಿಂದ ಸುಪ್ತವಾಗಿದ್ದ ನಮ್ಮ ಬದುಕಿನ ಭೂತ ಸಂಗತಿಗಳೆಲ್ಲಾ ನಿಧಾನವಾಗಿ ಬಿಚ್ಚಿಕೊಳ್ಳುತ್ತಿವೆ ನಾನು ಬೆಳೆಯತೊಡಗಿದಂತೆಲ್ಲಾ ಸ್ವಲ್ಪಮಟ್ಟಿಗೆ ನನ್ನ ಅಪ್ಪನ ಸ್ವಭಾವದ ಪರಿಚಯವಾದುದು ನನ್ನ ಅಣ್ಣನಿಂದ. ಅಲ್ಪ ಮಟ್ಟಿಗೆ ಅಕ್ಕನ ಮೂಲಕ. ಚೂರುಪಾರು ಊರಿನ ಜನರಿಂದ. ಆಶ್ಚರ್ಯದ ಸಂಗತಿ ಎಂದರೆ ಅಪ್ಪ ಸತ್ತ ಮೇಲೆ ಮೂವತ್ತೈದು ವರ್ಷ ಜೀವಿಸಿದ ಅಮ್ಮ, ಅಪ್ಪನ ವಿಷಯ ಬಂದಾಗ ತುಟಿ ಬಿಚ್ಚುತ್ತಿರಲಿಲ್ಲ. ಯಾವ ಕೆಲಸಕ್ಕೂ ಸೈ ಎನ್ನುವಂತಿದ್ದ ಅಪ್ಪ ಬಡವನಾಗಿ ಬದುಕಿದ್ದು ಮತ್ತು ಬಡವನಾಗಿಯೇ ಸತ್ತಿದ್ದು ಮಾತ್ರ ದೊಡ್ಡ ವಿಪರ್ಯಾಸ. ಮಹಾಕೋಪಿಷ್ಠ, ಅಲ್ಪ ತೃಪ್ತ, ಎಂದೂ